ಸಂಪಾದನೆಗೆ ಏನಾದರೂ ದಾರಿಯಿದ್ದರೆ ಹೇಳು' ಎಂದು ಕೇಳಿದ. 'ನನ್ನಲ್ಲಿ ಬೇರೆ ದಾರಿ ಏನೂ ಇಲ್ಲ. ಯಾವುದಾದರೂ ರೈತನ ಬಳಿ ಕೆಲಸ ಮಾಡಿ ಹಣ ಸಂಪಾದಿಸು' ಎಂದ ವ್ಯಾಪಾರಿಯ ಮಗ.

ರಾಜಕುಮಾರ ಒಬ್ಬ ರೈತನ ಬಳಿ ಹೋಗಿ ಕೆಲಸ ಕೊಡುವಂತೆ ಕೇಳಿದ. ಆ ರೈತ 'ಬಾರಪ್ಪ, ನಿನ್ನಂಥ ಶ್ರಮಜೀವಿ ಯಾವಾಗ ಬಂದಾನು ಎಂದು ಕಾದು ಕುಳಿತಿದ್ದೆ. ಹೇಳಿದ ಕೆಲಸ ಮಾಡಿದರೆ ಯೋಗ್ಯ ಸಂಬಳವನ್ನೂ ಕೊಡುತ್ತೇನೆ. ತಪ್ಪಿದರೆ ಹುಣಸೆ ಎಲೆಯಲ್ಲಿ ಬಡಿಸಿದ ಊಟ ಮಾತ್ರ ಸಿಗುತ್ತದೆ, ಸಂಬಳವಿಲ್ಲ. ಈ ಕೆಲಸ ಮಾಡಲು ಸಾಧ್ಯವಿಲ್ಲ ಎಂದು ಹೊರಟರೆ ನಿನ್ನ ಬೆರಳುಗಳನ್ನು ಕತ್ತರಿಸಿ ಕೊಡಬೇಕು. ನಾನೇ ನಿನ್ನನ್ನು ಬೇಡವೆಂದು ಕಳಿಸುವುದಾದರೆ ನನ್ನ ಬೆರಳುಗಳನ್ನು ಕೊಡುತ್ತೇನೆ, ಆಗಬಹುದೇ?' ಎಂದು ಕೇಳಿದ. 'ನಿಮ್ಮ ಮಾತುಗಳು ನನಗೆ ಒಪ್ಪಿಗೆ. ಕೆಲಸಕ್ಕೆ ಸೇರಿಸಿಕೊಳ್ಳಲೇ?' ಎಂದ ರಾಜಕುಮಾರ.

ದುಷ್ಟನಾದ ಆ ರೈತ, ಒಂದು ದೊಡ್ಡ ತೊಟ್ಟಿ ತೋರಿಸಿ ಹಳ್ಳದಿಂದ ಕೊಡದಲ್ಲಿ ನೀರು ತಂದು ಅದನ್ನು ಭರ್ತಿ ಮಾಡಲು ಹೇಳಿದ. ದಿನವಿಡೀ ನೀರು ತಂದರೂ ತೊಟ್ಟಿ ಭರ್ತಿಯಾಗಲಿಲ್ಲ. ತೊಟ್ಟಿಯ ತಳದಲ್ಲಿ ರೈತ ಒಂದು ಕೊಳವೆಯನ್ನಿರಿಸಿ ನೀರೆಲ್ಲವೂ ಗುಪ್ತವಾಗಿ ತೋಟಕ್ಕೆ ಹರಿಯುವಂತೆ ಮಾಡಿದ್ದ. ನೀರು ತಂದು ರಾಜಕುಮಾರ ಸುಸ್ತಾದ. ರೈತ ಸಿಟ್ಟಿನಿಂದ ಹಾರಾಡಿದ. 'ನೀನು ಸೋಮಾರಿ. ನಿನಗೆ ಹುಣಸೆ ಎಲೆಯಲ್ಲಿನ ಊಟವೇ ಗತಿ' ಎಂದ. ರಾಜಕುಮಾರನಿಗೆ ಉಪವಾಸವಿದ್ದು ಗೊತ್ತಿಲ್ಲ. ಕೆಲಸ ಮಾಡಲು ಆಗುವುದಿಲ್ಲವೆಂದರೆ ಬೆರಳುಗಳನ್ನು ಕೊಡಬೇಕಾಗುತ್ತದೆ. ಮರುದಿನವೂ ಈ ಕೆಲಸ ಮಾಡಿ ಅವನು ಬಸವಳಿದು ಹೋದ. ಮರುದಿನ ರಾಜಕುಮಾರ ವ್ಯಾಪಾರಿಯ ಮಗನ ಬಳಿ ಹೋಗಿ, ದುಷ್ಟ ರೈತನ ವಿಷಯವನ್ನು ಕಣ್ಣೀರಿಡುತ್ತ ಕೇಳಿಕೊಂಡ. ವ್ಯಾಪಾರಿಯ ಮಗ ಅವನಿಗೆ ಹೊಟ್ಟೆ ತುಂಬ ಊಟ ಬಡಿಸಿದ. 'ನೀನು ನಿಶ್ಚಿಂತೆಯಿಂದಿರು. ನಿನ್ನ ಉಡುಪು ಧರಿಸಿ ನಾನು ಈಗಲೇ ಆ ರೈತನ ಮನೆಗೆ ಹೋಗುತ್ತೇನೆ' ಎಂದ. ವ್ಯಾಪಾರಿಯ ಮಗ ವೇಷ ಬದಲಿಸಿ ರೈತನ ಮನೆಗೆ ಬಂದು, 'ಒಡೆಯಾ, ತೊಟ್ಟಿ ತುಂಬಿಸದೇ ಹೋಗಿದ್ದಕ್ಕೆ ನನಗೆ ನಿದ್ರೆ ಹತ್ತಲಿಲ್ಲ. ಅದಕ್ಕೆ ಅದನ್ನು ತುಂಬಿಸಿ ಹೋಗಲು ಬಂದಿದ್ದೇನೆ' ಎಂದ. ರೈತ ಹಿರಿಹಿರಿ ಹಿಗ್ಗಿದರೂ, ಅದನ್ನು ತೋರ್ಪಡಿಸದೇ ಆಗಲಿ ಎಂದು ಅಪ್ಪಣೆ ಕೊಟ್ಟ. ವ್ಯಾಪಾರಿಯ ಮಗ ತೊಟ್ಟಿಯ ತಳದಲ್ಲಿ ರೈತ ಗುಪ್ತವಾಗಿರಿಸಿದ್ದ ಕೊಳವೆಯನ್ನು ಪತ್ತೆ ಮಾಡಿದ. ಆ ಕೊಳವೆಯನ್ನು ಮನೆಯೊಳಗೆ ನೀರು ಹೋಗುವಂತೆ ತಿರುಗಿಸಿಟ್ಟು ನೀರು ತುಂಬತೊಡಗಿದ.

ಮಧ್ಯರಾತ್ರಿ ರೈತನಿಗೆ ಎಚ್ಚರವಾದಾಗ ಮನೆಯೊಳಗೆ ನೀರು ತುಂಬಿ ಧಾನ್ಯಗಳೆಲ್ಲ ನೆನೆದಿದ್ದವು. ಬಟ್ಟೆಗಳು, ಹಣ ಎಲ್ಲವೂ ಉಪಯೋಗಿಸದಂತೆ ಹಾಳಾಗಿತ್ತು. ವ್ಯಾಪಾರಿಯ ಮಗ ನೀರು ತುಂಬುತ್ತಲೇ ಇದ್ದ. ರೈತನಿಗೆ ಕೋಪ ಬಂತು. 'ನಿನ್ನ ಕೆಲಸ ನಿಲ್ಲಿಸು. ಇಲ್ಲವಾದರೆ ನನ್ನ ಮನೆ ಮುಳುಗಿಬಿಡುತ್ತದೆ' ಎಂದು ಕೂಗಿದ. 'ಇಲ್ಲ, ತೊಟ್ಟಿ ಭರ್ತಿಯಾಗುವವರೆಗೂ ಕೆಲಸ ನಿಲ್ಲಿಸುವುದಿಲ್ಲ' ಎಂದ ಆತ.

ರೈತ ಕೋಪದಿಂದ, 'ಈಗಲೇ ಕೆಲಸ ಬಿಟ್ಟುಹೋಗು' ಎಂದು ಆಜ್ಞಾಪಿಸಿದ. 'ಆಗಲಿ, ನಾನು ಹೊರಡುತ್ತೇನೆ. ಆದರೆ ನೀವೇ ಹೇಳಿದ ಪ್ರಕಾರ ನೀವು ನನ್ನನ್ನು ಕೆಲಸದಿಂದ ಬಿಟ್ಟುಹೋಗು ಎಂದಿದ್ದಕ್ಕೆ ನಿಮ್ಮ ಬೆರಳುಗಳನ್ನು ಕತ್ತರಿಸಿ ಕೊಡಬೇಕು' ಎಂದ. ರೈತನಿಗೆ ಅವನ ಕೈಯಿಂದ ಪಾರಾಗಲು ಸಾಧ್ಯವೇ ಇರಲಿಲ್ಲ. ಬೆರಳುಗಳನ್ನು ಉಳಿಸಿಕೊಳ್ಳಲು ಅವನಿಗೆ ತನ್ನ ಒಬ್ಬಳೇ ಮಗಳನ್ನು ಕೊಟ್ಟು ಮದುವೆ ಮಾಡಿ, ತನ್ನ ಆಸ್ತಿಗೂ ಉತ್ತರಾಧಿಕಾರಿಯೆಂದು ಒಪ್ಪಿಕೊಂಡ.

ರಾಜಕುಮಾರ ಇಕ್ಕಟ್ಟಿನಿಂದ ಪಾರಾಗಿ ಗೆಳೆಯನೊಂದಿಗೆ ಅರಮನೆಗೆ ಮರಳಿದ. ಹಣಕ್ಕಿಂತ ಜಾಣ್ಮೆಯೇ ದೊಡ್ಡದೆಂಬುದನ್ನು ಒಪ್ಪಿಕೊಂಡ.

❖